ವರಕವಿ ಸರ್ವಜ್ಞನ ಜನ್ಮಸ್ಥಳ ಅಬಲೂರು ಗ್ರಾಮಕ್ಕೆ ಸುವ್ಯವಸ್ಥಿತ ರಸ್ತೆಗಳಿಲ್ಲದ ಪ್ರವಾಸಿಗರಿಗೆ ಅತೀವ ತೊಂದರೆ

379 (1507): ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು):-

ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವರಕವಿ ಸರ್ವಜ್ಞನ ಜನ್ಮಸ್ಥಳ ಹಿರೇಕೆರೂರು ತಾಲ್ಲೂಕು ಅಬಲೂರು ಗ್ರಾಮಕ್ಕೆ ಸುವ್ಯವಸ್ಥಿತ ರಸ್ತೆಗಳಿಲ್ಲದೆ ಪ್ರವಾಸಿಗರಿಗೆ ಐತಿಹಾಸಿಕ ಸ್ಥಳದ ದರ್ಶನ ಪಡೆಯಲು ಅತೀವ ತೊಂದರೆಯಾಗಿರುವುದನ್ನು ಸರ್ಕಾರವು ಗಮನಿಸಿದೆಯೇ;

ಆ) ಹಾಗಿದ್ದಲ್ಲಿ, ಶಿವಮೊಗ್ಗ ಜಿಲ್ಲೆ ಮತ್ತು ಧಾರವಾಡ ಜಿಲ್ಲೆಯಿಂದ ಅಬಲೂರಿಗೆ ಸಾರಿಗೆ ಸಂಪರ್ಕ ಒದಗಿಸಲು ಆನವಟ್ಟಿ – ಬ್ಯಾಡಗಿ ರಸ್ತೆ ಮತ್ತು ರಾಣೆಬೆನ್ನೂರು ಭಾರಂಗಿ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಿ, ಅಭಿವೃದ್ಧಿಪಡಿಸಿ ಡಾಂಬರೀಕರಣ ಮಾಡಲು ಸರ್ಕಾರವು ಯೋಚಿಸಿದೆಯೇ; ಈ ಬಗ್ಗೆ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ; (ಸದರಿ ಮಾರ್ಗಗಳ ವಿವರಣೆ ನೀಡುವುದು);

ಇ) ಈ ಕಾಮಗಾರಿಗೆ ಬೇಕಾದ ಅಂದಾಜು ಮೊತ್ತವೆಷ್ಟು ? 1993-94ರ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು;

ಈ) ಈ ಕಾಮಗಾರಿಗಳ ಬಗ್ಗೆ ಸರ್ಕಾರದವರ ನೀತಿ ಹಾಗೂ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಗಮನಿಸಿದೆ.

ಆ) 1) ಆನವಟ್ಟಿ – ಬ್ಯಾಡಗಿ ರಸ್ತೆ ವಯಾ ಚಿಕ್ಕೇರೂರು – ಹಂಸಭಾವಿ ರಸ್ತೆಯ ಭಾಗವಾದ ಚಿಕ್ಕೇರೂರು – ಹಂಸಭಾವಿರಸ್ತೆ (11 ಕಿ.ಮೀ.) ಅನ್ನು 6.5.92ರಲ್ಲಿ ಮೇಲ್ದರ್ಜೆಗೇರಿಸಿದ್ದು ಈಗ ಸದರಿ ಆನವಟ್ಟಿ – ಬ್ಯಾಡಗಿ ವಯಾ ಚಿಕ್ಕೇರೂರು – ಹಂಸಭಾವಿ ರಸ್ತೆಯು (42 ಕಿ.ಮೀ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿದೆ. ಈ ರಸ್ತೆಯ ಅಭಿವೃದ್ಧಿ ಮತ್ತು ಡಾಂಬರೀಕರಣವನ್ನು ಅನುದಾನದ ಲಭ್ಯತೆಯನ್ನು ಅನುಸರಿಸಿ ಹಂತಹಂತವಾಗಿ ತೆಗೆದುಕೊಳ್ಳಲಾಗುವುದು.

2) ರಾಣೆಬೆನ್ನೂರು – ಭಾರಂಗಿ ರಸ್ತೆ (40 ಕಿ.ಮೀ)ಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ. ಹಿರೇಕೆರೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಹಿರೇಕೆರೂರು – ಕೋಡ ಅಬಲೂರು ಮಾರ್ಗವಾಗಿ ಹೋಗುವ ರಸ್ತೆಯನ್ನು ಅಭಿವೃದ್ಧಿ ಪಡಿಸುವ 34 ಲಕ್ಷ ರೂ.ಗಳ ಒಂದು ಅಂದಾಜು ಸರ್ಕಾರದಲ್ಲಿ 92:93ರಲ್ಲಿ ಸ್ವೀಕೃತವಾಗಿದ್ದು ಪರಿಶೀಲನೆಯಲ್ಲಿದೆ.

ಇ) ಆನವಟ್ಟಿ – ಬ್ಯಾಡಗಿ ರಸ್ತೆಯ ಭಾಗವಾದ ಚಿಕ್ಕೇರೂರು ಹಂಸಭಾವಿ ರಸ್ತೆಯನ್ನು ಅಭಿವೃದ್ಧಿಪಡಿಸಿ ಡಾಂಬರೀಕರಣ ಮಾಡಲು ಸುಮಾರು 20 ಲಕ್ಷ ರೂ. ಹಾಗೂ ರಾಣೆಬೆನ್ನೂರು – ಭಾರಂಗಿ ರಸ್ತೆಯನ್ನು ಅಭಿವೃದ್ಧಿಪಡಿಸಿ ಡಾಂಬರೀಕರಣ ಮಾಡಲು ಸುಮಾರು 90.00 ಲಕ್ಷ ರೂ. ಬೇಕಾಗುವುದು. ಈ ಕಾಮಗಾರಿಗಳಿಗೆ ಅನುದಾನ ಒದಗಿಸುವ ವಿಷಯ ಪರಿಶೀಲನೆಯಲ್ಲಿದೆ.

ಈ) ಲಭ್ಯವಿರುವ ಅನುದಾನದ ಮಿತಿಗೊಳಪಟ್ಟು, ಈ ರಸ್ತೆಗಳನ್ನು ಹಂತಹಂತವಾಗಿ ಅಭಿವೃದ್ಧಿಪಡಿಸಲಾಗುವುದು.

ಶ್ರೀ ಬಿ.ಹೆಚ್. ಬನ್ನಿಕೋಡ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸಚಿವರಾದಂಥ ರಂಗನಾಥ್‌ರವರಿಗೆ ನಮ್ಮ ಹಿರೇಕೆರೂರ್ ತಾಲ್ಲೂಕು ಅಪರಿಚಿತವೇನಲ್ಲ. ಆದರೆ ಇಲ್ಲಿ ಕುಳ್ಳಿರತಕ್ಕಂಥ ಅನವಟ್ಟಿ – ಬ್ಯಾಡಗಿ ರಸ್ತೆ ಅಬಲೂರು ಮಾರ್ಗವಾಗಿ, ವರಕವಿ ಸರ್ವಜ್ಞನ ಊರು, ರಾಣೆಬೆನ್ನೂರು ಭಾರಂಗಿ ರಸ್ತೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರಕಾರದ ಪರಿಶೀಲನೆಯಲ್ಲಿರುವುದಿಲ್ಲ ಎಂದು ಹೇಳಿದ್ದಾರೆ. ಅದೇ ಮೂರನೇ ಪ್ಯಾರ ಕೊನೆಯ ವಾಕ್ಯದಲ್ಲಿ ಈ ಕಾಮಗಾರಿಗಳಿಗೆ ಅನುದಾನ ಒದಗಿಸುವ ವಿಷಯ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಮಾನ್ಯ ಸಚಿವರಿಗೆ ಈ ವಿಷಯ ಬಹುತೇಕ ಗೊತ್ತಿದೆ. ಈಗಿರತಕ್ಕಂಥ ಅನುದಾನಕ್ಕೆ ಒಳಪಟ್ಟು ಮಾಡುತ್ತೇವೆ ಎಂದು ಹೇಳಿದ್ದಾರೆ. ಇಲ್ಲಿರತಕ್ಕಂಥ ಮಹತ್ವ ಮತ್ತು ಈ ಸ್ಥಳದ ಐತಿಹಾಸಿಕ ಮಹತ್ವವು ತಮಗೆ ಗೊತ್ತಿದೆ. ಆದ್ದರಿಂದ ವರಕವಿ ಸರ್ವಜ್ಞನ ಜನ್ಮಸ್ಥಳಕ್ಕೆ ಹೋಗುವ ರಸ್ತೆಯ ಸಲುವಾಗಿ ತಾವುಗಳು ವಿಶೇಷವಾಗಿ ಸರಕಾರದಿಂದ ಹಣವನ್ನು ಒದಗಿಸಿ ಅನವಟ್ಟಿ – ಬ್ಯಾಡಗಿ, ಇದು 42 ಕಿ.ಮೀ.ಗಳು ಮತ್ತು ರಾಣೆಬೆನ್ನೂರು – ಭಾರಂಗಿ, ಇದು 40 ಕಿ.ಮೀ.ಗಳು ಇವು ಶಿವಮೊಗ್ಗ ಮತ್ತು ಬ್ಯಾಡಗಿ ಅಂತರ್ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವಂಥ ಮತ್ತು ಅಬಲೂರಿಗೆ ಸಂಪರ್ಕ ಕಲ್ಪಿಸುವಂಥ ರಸ್ತೆಗಳಾಗಿರುವುದರಿಂದ ಇವುಗಳಿಗೆ ವಿಶೇಷ ಹಣವನ್ನು ಒದಗಿಸಿ ಈ ವರ್ಷ ಆದಷ್ಟು ಬೇಗ ಈ ಕಾಮಗಾರಿಗಳನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್:– ಮಾನ್ಯ ಅಧ್ಯಕ್ಷರೇ, ಈ ಎರಡೂ ರಸ್ತೆಗಳು ಕೂಡ ಬಹಳ ದೊಡ್ಡ ರಸ್ತೆಗಳು. ಮಾನ್ಯ ಸದಸ್ಯರು ಮುಖ್ಯಮಂತ್ರಿಗಳಿಗೂ ಕೂಡ ಒಂದು ಪತ್ರವನ್ನು ಬರೆದಿದ್ದಾರೆ. ಅವರ ಉತ್ತರವು ಕೂಡ ಮಾನ್ಯ ಸದಸ್ಯರಿಗೆ ತಲುಪಿದೆ. ಆನವಟ್ಟಿ – ಬ್ಯಾಡಗಿ ರಸ್ತೆ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ. ಬಹುತೇಕ ಅವರ ಭಾಗದಲ್ಲಿ 11 ಕಿ.ಮೀ. ಎಂದು ಕಾಣುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಹಂಸಭಾವಿ – ಚಿಕ್ಕೇರೂರು 11 ಕಿ.ಮೀ. ಈ ಭಾಗಕ್ಕೆ ಬರುವುದಿಲ್ಲ. ಅದು ಈಗ ಸೂಚಿಸಿರತಕ್ಕಂಥ ರಸ್ತೆಯ ಭಾಗದಲ್ಲಿ ಬರುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್:– ಈಗ ಆನವಟ್ಟಿ – ಬ್ಯಾಡಗಿ ರಸ್ತೆಯನ್ನು ನಾವು ಮಾಡಬೇಕಾದರೆ ಸುಮಾರು 90 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಇನ್ನೊಂದು ರಸ್ತೆಯಾದ ರಾಣೆಬೆನ್ನೂರು – ಭಾರಂಗಿ ರಸ್ತೆಯು 40 ಕಿ.ಮೀ. ಉದ್ದವ ರಸ್ತೆ, ಇದಕ್ಕೆ 34 ಲಕ್ಷ ರೂಪಾಯಿಗಳ ಅಂದಾಜು ಆಗಿ ಸರಕಾರದ ಪರಿಶೀಲನೆಯಲ್ಲಿದೆ. ಇದಕ್ಕೆಲ್ಲಾ ಹಣವನ್ನು ಒದಗಿಸಲು ಎಷ್ಟು ಮಟ್ಟಿಗೆ ಸಾಧ್ಯ ಎಂಬ ಬಗ್ಗೆ ಕೂಡ ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಮಾನ್ಯ ಮುಖ್ಯಮಂತ್ರಿಗಳಿಗೆ ಏನು ಕಾಗದ ಬರೆದಿದ್ದಾರೆ ಅದರ ಬಗ್ಗೆ ಅವರು ಮಾಡಿದ ಪ್ರಸ್ತಾಪದ ಪ್ರತಿಯು ಕೂಡ ನನಗೆ ಬಂದಿದೆ. ಇದನ್ನು ಪರಿಶೀಲನೆ ಮಾಡಿ ತೆಗೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ತಾವುಗಳು ಹೇಳಿದ ಎಲ್ಲಾ ರಸ್ತೆಗೆ ಒಂದು ಕೋಟಿ ಇಪ್ಪತ್ತನಾಲ್ಕು ಲಕ್ಷ ರೂಪಾಯಿಗಳು ಆಯಿತು. ಸರ್ವಜ್ಞನಿಗೋಸ್ಕರ ಇಷ್ಟೊಂದು ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡುವುದು ಕಷ್ಟವಾಗುತ್ತದೆ. ಸರ್ವಜ್ಞ ಇದನ್ನೆಲ್ಲಾ ಮಾಡಿಕೊಡಿ ಎಂದು ಕೇಳಲಿಲ್ಲ. ಯಾವುದೇ ರಸ್ತೆಗೆ ಸಾಮಾನ್ಯವಾಗಿ ಆದ್ಯತೆಯನ್ನು ಕೊಡಬೇಕಾದರೆ, ವ್ಯಾಪಾರ, ಉದ್ದಿಮೆ ಇತ್ಯಾದಿಗಳ ದೃಷ್ಟಿಯಿಂದ ಅದರ ಅವಶ್ಯಕತೆ ಇದ್ದರೆ ಅದಕ್ಕೆ ಮೊದಲ ಆದ್ಯತೆಯನ್ನು ಕೊಡಬೇಕಾಗುತ್ತದೆ. ನಂತರ ಬೇರೆಯವುಗಳಿಗೆ ಆದ್ಯತೆಯನ್ನು ಕೊಡಬೇಕಾಗುತ್ತದೆ. ಚಿಕ್ಕೆರೂರು – ಹಂಸಭಾವಿ ರಸ್ತೆಯನ್ನು ನಾನು ನೋಡಿದ್ದೇನೆ. ನಾನು ಪರಿಶೀಲನೆ ಮಾಡಿ ಕೆಲಸ ಮಾಡಲು ಪ್ರಯತ್ನ ಮಾಡುತ್ತೇನೆ.

. ಶ್ರೀ ಬಿ.ಹೆಚ್. ಬನ್ನಿಕೋಡ್:– ಇದೊಂದು ಐತಿಹಾಸಿಕ ಸ್ಥಳವಿರುವುದರಿಂದ ಇದಕ್ಕೆ ಹಣದ ಕೊರತೆ ಇದೆ ಎಂದು ಹೇಳುವುದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಗಳ ಪತ್ರ ನನಗೂ ಕೂಡ ಬಂದಿದೆ. ಆ ಪತ್ರದ ಮೂಲಕ 1993–94ರಲ್ಲಿ ಈ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ಹೇಳಿದ್ದನ್ನು ನಾನು ಗಮನಿಸಿದ್ದೇನೆ. ಆದ್ದರಿಂದ ತಮ್ಮಲ್ಲಿ ಕೂಡ ಈ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಮೂಡಿಗೆರೆ ತಾಲ್ಲೂಕಿನಲ್ಲಿ ಕೆರೆಗಳ ಹಾಗೂ ಅಣೆಕಟ್ಟುಗಳ ಸಂಖ್ಯೆ

380 (246): ಶ್ರೀಮತಿ ಮೋಟಮ್ಮ (ಮೂಡಿಗೆರೆ):–

ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒಳಪಟ್ಟಿರುವ ಕೆರೆಗಳ ಹಾಗೂ ಅಣೆಕಟ್ಟುಗಳ ಸಂಖ್ಯೆ ಎಷ್ಟು; (ವಿವರವನ್ನು ಒದಗಿಸುವುದು);

ಆ) ಅವುಗಳಲ್ಲಿ ಎಷ್ಟು ಕೆರೆ, ಅಣೆಕಟ್ಟುಗಳ ದುರಸ್ತಿ ಕಾರ್ಯ ಮಾಡಲಾಗುತ್ತಿದೆ;

ಇ) ಅಂಗಡಿ ದೊಡ್ಡಕೆರೆ ದುರಸ್ತಿ ಮಾಡದಿರಲು ಕಾರಣವೇನು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):–

ಅ) 5 ಕೆರೆಗಳು ಮತ್ತು 7 ಅಣೆಕಟ್ಟುಗಳಿವೆ.

ಕೆರೆಗಳು

1. ಕಾವರೆಗೆ ಗ್ರಾಮದ ಭೈದರ್‌ಹಳ್ಳಿ ಕೆರೆ
2. ಲೋಕುವಳ್ಳಿ ಗ್ರಾಮದ ಉಡುಕಿರನ ಕೆರೆ
3. ಲೋಕುವಳ್ಳಿ ಗ್ರಾಮದ ಉಂಡುಮಾರಮ್ಮನ ಕೆರೆ
4. ಅಂಗಡಿ ಗ್ರಾಮದ ದೊಡ್ಡಕೆರೆ
5. ದಾರದ ಹಳ್ಳಿ ಜೋಗಣ್ಣನ ಕೆರೆ ದೇವಿ ಕೆರೆ

ಅಣೆಕಟ್ಟುಗಳು

1. ಜಾಸಾನ್ ಗ್ರಾಮದ ತಲಗೋಡು ಪಿಕ್‌ಅಪ್
2. ಮಗ್ಗಲಮಕ್ಕಿ ಪಿಕ್‌ಅಪ್
3. ಹೊರಟ್ಟಿ ಪಿಕ್‌ಅಪ್
4. ಇಡಕಣಿ ಪಿಕ್‌ಅಪ್
5. ಮುರಡನ ಕೆರೆ ಅಣೆಕಟ್ಟು
6. ಕೂವೇ ಅಣೆಕಟ್ಟು
7. ಹೆಸಕಲ್ ಪಿಕ್‌ಅಪ್

ಆ) ಒಂದು ಅಣೆಕಟ್ಟಿನ ದುರಸ್ತಿ ನಡೆಯುತ್ತಿದೆ.

ಇ) ಈ ಕೆರೆಯು ಡಿಸೆಂಬರ್ 1992ರಲ್ಲಿ ಜಿಲ್ಲಾಪರಿಷತ್‌ನಿಂದ ಸಣ್ಣ ನೀರಾವರಿ ವಲಯಕ್ಕೆ ಹಸ್ತಾಂತರಗೊಂಡಿದೆ. ಪರಿವೀಕ್ಷಣೆ ನಂತರ, ದುರಸ್ತಿಯ ಅವಶ್ಯಕತೆಯನ್ನು ಪರಿಶೀಲಿಸಲಾಗುವುದು.